ಹತ್ತು ವರ್ಷ. ಸಣ್ಣದಕ್ಕೆ ಎಂಟು. ಸಣ್ಣವನ ಪಕ್ಕ ಊಟಕ್ಕೆ ಕೂತಾಗ ಒಂದು ಗಳಿಗೆ ಅವನ ಕಡೆ ಹೆಚ್ಚೇ ನೋಡಿದ ನಾಗರಾಜ. 'ಎಲ್ಲಕ್ಕೂ ಮೂಲಕಾರಣ ಈ ಇವನು' ಎನ್ನುವ ಭಾವ ಬೇಡವೆಂದರೂ ಮನಸ್ಸಿನಲ್ಲಿ ಸುಳಿದು ಹೋಯ್ತು. ಬಹುಶಃ ಸೀತೆಗೂ ಹೀಗೇ ಅನಿಸಿರಬಹುದು. ಅವಳಿಗೆ ಅರಿವಿಲ್ಲದೆಯೇ ಸಣ್ಣವನು ಕಲೆಸುತ್ತಿದ್ದ ಸಾರನ್ನಕ್ಕೆ ಒಂದು ಚಮಚ ತುಪ್ಪ ಹೆಚ್ಚಿಗೆ ಬಿತ್ತು. "ಬಿಸೀ ಉಂಟು, ಕೈ ಸುಟ್ಟಂಬೇಡ. ನಾನು ಕಲೆಸಿಕೊಡ್ಲಾ?" ಆಪ್ಯಾಯತೆಯಿಂದ ಕೇಳಿದ ನಾಗರಾಜ. 'ಬೇಡ' ಅನ್ನುವಂತೆ ತಲೆ ಅಲುಗಿಸಿದ ಹುಡುಗ ತೋರುಬೆರಳನ್ನು ಸಾರನ್ನದಲ್ಲಿ ಅದ್ದಿ ಬಾಯಿಗಿಟ್ಟುಕೊಂಡು ಚೀಪಿದ. ಎಲ್ಲರ ಊಟವಾದ ಮೇಲೆ ತಾನೊಂದು ಬಾಳೆಲೆ ಹಾಕಿಕೊಂಡು, ಸಾಕಾಗುವಷ್ಟು ಅನ್ನ ಅಂದಾಜಿನಿಂದ ಬಡಿಸಿಕೊಂಡು, ಎಲೆ ಮುಂದೆ ಸಾರು, ಮಜ್ಜಿಗೆಯ ಪಾತ್ರೆ ಇಟ್ಟುಕೊಂಡು ಸೀತೆ ಊಟಕ್ಕೆ ಕೂತಳು. ಯಾವತ್ತಿನಂತಾಗಿದ್ದರೆ 'ಬಡಿಸ್ಲೇನೇ?' ಎಂದು ಅವನು ಉಪಚಾರಕ್ಕಾದರೂ ಕೇಳಬೇಕಿತ್ತು. ದವಡೆಹಲ್ಲಿನ ಹುಳುಕಿನಲ್ಲಿ ಶೇಖರಣೆಯಾಗಿದ್ದನ್ನು ತೆಗೆದು ಚೊಕ್ಕ ಮಾಡಿಕೊಳ್ಳಲು ಸೀತೆಯ ಎಡಗೈಯ ಬಳೆಯಲ್ಲಿರುತ್ತಿದ್ದ ಪಿನ್ನನ್ನು ತಾನೇ ಬಿಡಿಸಿ ತೆಗೆದುಕೊಂಡು ಹೋಗಬೇಕಿತ್ತು.

ಮತ್ತೆ ಮುಂಚೇಕಡೆಯ ಮಾಮೂಲಿ ಜಾಗದಲ್ಲಿ ಸ್ಥಾಪನೆಯಾದ ಮೇಲೆ ನಾಗರಾಜನಿಗೆ ಪಿನ್ನು ತೆಗೆದುಕೊಂಡು ಬರದಿದ್ದದ್ದು ನೆನಪಾಯ್ತು. ಪದೇಪದೇ ನಾಲಿಗೆಯ ತುದಿ ಡೊಗರು ಬಿದ್ದ ಹಲ್ಲಿನ ಕಡೆ ಹೊರಳುತ್ತಿದೆ. ಒಳಗಿದ್ದುದನ್ನು ಈಚೆಗೆಳೆಯಲು ಹವಣಿಸುತ್ತಿದೆ. ಕೂತಲ್ಲಿಂದ ಮತ್ತೆ ಎದ್ದು ಒಳಗೆ ಹೋಗಲು ರಗಳೆ ಅನಿಸಿ ನಾಗರಾಜ ಮಂಡಿಯ ಸುತ್ತಾ ಕೈ ಬಿಗಿದುಕೊಂಡು ಕೂತಲ್ಲೇ ಕೂತ.

★★★

"ನಿನ್ನ ತೋಟಕ್ಕೆ ಲಗ್ನಾಗಿದೆ. ತಲೆಮಾರಿಂದ ನಾವೇ ಅನುಭವಿಸಿಕೊಂಡು ಬಂದಿರೋದು. ಯಾರೋ ಮೂರನೆಯವರಿಗೆ ಕೊಡೋಕೆ ಮನಸ್ಸಿಗೆ ಕಷ್ಟ ಆಗುತ್ತೆ. ನಿಂಗಾದ್ರೆ ಚೂರು ಹೆಚ್ಚು ಕಡಿಮೆ ಮಾಡಿ ಕೊಡ್ತೀನಿ..." ಚಿಕ್ಕಪ್ಪ ತಿರುಗಾಮುರುಗಾ ಈ ಮಾತನ್ನು ಹತ್ತು ಸಲ ಹೇಳಿದ್ದ. ಎಲ್ಲಾ ಸರಿ. ದುಡ್ಡಿಗೆ ಎಲ್ಲಿ ಕದಿಯೋಕೆ ಹೋಗುವುದು?

"ವರ್ಷಾವರ್ಷ ಇಂತಿಷ್ಟು ಕೊಡ್ತೀವಿ ಅನ್ರೀ. ಅದರಿಂದ ಬಂದ ಉತ್ಪತ್ತಿ ಅದಕ್ಕೇ ಹಾಕಿದ್ರಾಯ್ತು" ಜಾಣೆ ಉಪಾಯ ಹೇಳಿಕೊಟ್ಟಿದ್ದಳು. ಚಿಕ್ಕಪ್ಪನ ಹತ್ತಿರ ಇಂತಾದ್ದೊಂದು ಪ್ರಸ್ತಾಪ ಇಡಲು ನಾಗರಾಜನಿಗೆ ಮುಜುಗರ. ವಿಧಿಯಿಲ್ಲ. ಹೆಂಡತಿ ಕಿವಿಯಲ್ಲಿ ಊದಿದ್ದನ್ನು ಚಿಕ್ಕಪ್ಪನ ಎದುರು ಬಾಯ್ಬಿಟ್ಟಿದ್ದ, ತಲೆ ಬಗ್ಗಿಸಿಕೊಂಡು, ಉಸಿರು ಬಿಗಿ ಹಿಡಿದುಕೊಂಡು. ಚಿಕ್ಕಪ್ಪ ಏನೂ ಮಾತಾಡದಿದ್ದುದನ್ನು ಗಮನಿಸಿ ಒಂಥರಾ ಆಗಿತ್ತು. ಕಾಯೋ, ಹಣ್ಣೋ? ಹಣ್ಣೋ, ಕಾಯೋ? ಚಿಕ್ಕಪ್ಪ ಅರ್ಥ ಮಾಡಿಸುವವನಂತೆ ನಿಧಾನಕ್ಕೆ ಹೇಳಿದ್ದ,

"ಅಲ್ವೋ, ನೀನೇ ಯೋಚ್ನೆ ಮಾಡು. ಬರಿಗೈಲಿ ಮಗಳ ಮನೆ ಸೇರ್ಕಂಡ್ರೆ ಮೂರುಕಾಸಿನ ಮರ್ಯಾದೆ ಇರುತ್ತಾ ನಮಗೆ? ಪ್ರತಿಯೊಂದಕ್ಕೂ ಅಳಿಯನ ಎದುರು ಕೈಯೊಡ್ಡೋಕಾಗುತ್ತಾ? ಮಗಳೂ ದುಡೀತಿದಾಳೆ ಅಂದ್ರೆ ಅದು ಬೇರೆ ಪ್ರಶ್ನೆ. 'ನಮ್ಜೊತೆ ಬಂದಿರಿ' ಅಂತ ಅವರು ಕರೀತಿರೋದೇ ದೊಡ್ಡ ಸಂಗ್ತಿ. ಕೊನೇಪಕ್ಷ ನಮ್ಮ ಖರ್ಚಿಗೆ ಬೇಕಾದಷ್ಟಾದ್ರೂ ಕೈಯಲ್ಲಿಟ್ಕಂಡಿರೋದು ಬ್ಯಾಡ್ವಾ?" ಚಿಕ್ಕಪ್ಪನ ಮಾತಲ್ಲಿ ಬೆರಳು ಮಡಚುವಂತಾದ್ದು ಏನಿತ್ತು? ಮುಖ ಬಾಡಿಸಿಕೊಂಡು ವಾಪಸು ಮನೆಗೆ ಬಂದಿದ್ದ ನಾಗರಾಜ. ತನ್ನ ಹತಾಶೆಯನ್ನು, ಅವಮಾನದಂತಾ ಭಾವನೆಯನ್ನು ಹೆಂಡತಿಯ ಎದುರು ಕಾರಿಕೊಂಡಿದ್ದ,

"ನಿನ್ನ ಮಾತು ಕೇಳಿದ್ದಕ್ಕೆ ಮಕಕ್ಕೆ ಮಂಗಳಾರತಿ ಆಯ್ತು. ಹಾಸಿಗೆ ಇದ್ದಷ್ಟು ಕಾಲು ಚಾಚೋಕೆ ಕಲೀಬೇಕು ಕಣೇ. ಆಕಾಶಕ್ಕೆ ಏಣಿ ಹಾಕೋಕೆ ಹೋಗ್ಬಾರ್ದು..."